**PW-01**

**ಇಂದು ದಿನಾಂಕ:**28.06.2025 **ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ಮಾಡಿಸಲಾಯಿತು.**

**ಪಾಟೀ ಸವಾಲು : ಪ್ರತಿವಾದಿ ಪರ ಶ್ರೀ. ವಕೀಲರಿಂದಃ**

ಈ ದಾವೆಯ ವಿಧ್ಯಮಾನ ಗೊತ್ತು. ಆಸ್ತಿ ನಮ್ಮ ತಾತನದ್ದು ಎಂದು ಕೇಸು ಹಾಕಿದ್ದೇನೆ. ದಾವಾ ಆಸ್ತಿ ನನ್ನ ತಾತನ ಆಸ್ತಿ ಎಂದು ತೋರಿಸಲು ನಕ್ಷೆ, ಕರ್ದಾ ದಾಖಲೆಗಳನ್ನು ಕೊಟ್ಟಿದ್ದೇನೆ. ನನ್ನ ತಾತನ ಹೆಸರು ದಾಸಿಚೆನ್ನ. ಆ ಬಗ್ಗೆ ಯಾವುದಾದರೂ ದಾಖಲೆ ಇದೆಯಾ ಎಂದರೆ ಅದೇ ದಾಖಲೆ. ದಾವಾ ಆಸ್ತಿಯಲ್ಲಿ ನಾನು ಸ್ವಾಧೀನವಿರುವ ಬಗ್ಗೆ ದಾಖಲೆ ಇದೆ. ಆ ದಾಖಲೆಯನ್ನು ನ್ಯಾಯಾಲಯಕ್ಕೆ ಕೊಟ್ಟಿದ್ದೇನೆ. ರಾಮನಾಥತುಂಗ ಗ್ರಾಮದಲ್ಲಿ ದಾಸಿ ಚೆನ್ನಯ್ಯ ಎಂಬ ಯಾವುದೇ ವ್ಯಕ್ತಿ ಇರಲಿಲ್ಲ ಎಂದರೆ ಸರಿಯಲ್ಲ. ನಾನು 1966-67 ರಲ್ಲಿ 7 ನೇ ತರಗತಿ ಓದಿದ್ದೇನೆ. ನನ್ನ ತಾತ ರಾಮನಾಥತುಂಗ ಗ್ರಾಮದಲ್ಲಿ ವಾಸವಿದ್ದ ಬಗ್ಗೆ ಮತದಾರರ ಗುರುತಿನ ಚೀಟಿ ಇರುವುದಿಲ್ಲ. ಪ್ರತಿವಾದಿ ನನ್ನ ಮತ್ತು ಇತರೆ ವಾದಿಗಳ ವಿರುದ್ಧ ಪಿರಿಯಾಪಟ್ಟಣದ ಕಿರಿಯ ಶ್ರೇಣಿಯ ನ್ಯಾಯಾಲಯದಲ್ಲಿ ಅಸಲು ದಾವಾ ಸಂಖ್ಯೆ 275/2021 ರಂತೆ ಶಾಶ್ವತ ನಿರ್ಬಂಧಕಾಜ್ಞೆಗಾಗಿ ಕೇಸು ಹಾಕಿದ್ದಾರೆ ಎಂದರೆ ಸರಿ. ಆ ಕೇಸಿನಲ್ಲಿ ಮಾಡಿರುವ ಮಧ್ಯಂತರ ಆದೇಶದ ಪ್ರಕಾರ ದಾವಾ ಆಸ್ತಿಗೆ ನಾವು ತೊಂದರೆ ಕೊಡಬಾರದೆಂದು ಆದೇಶ ಮಾಡಲಾಗಿದೆ ಎಂದರೆ ಸರಿ. ಆ ರೀತಿ ಆದೇಶವಿದ್ದರೂ ಸಹ ನಾವು ಪ್ರತಿವಾದಿಗೆ ತೊಂದರೆ ಕೊಡುತ್ತಿದ್ದ ಕಾರಣ ಅವರು ಪಿರಿಯಾಪಟ್ಟಣ ಪೊಲೀಸ್ ಠಾಣೆಗೆ ದೂರು ಕೊಟ್ಟಿದ್ದರು ಎಂದರೆ ನಾನು ಕೂಡ ದೂರು ಕೊಟ್ಟಿದ್ದೆ. ಪ್ರತಿವಾದಿ ಸಲ್ಲಿಸಿದ್ದ ದೂರಿನ ಮೇರೆಗೆ ಪೊಲೀಸ್ ಠಾಣೆಯಲ್ಲಿ ನಾನು ಅವರ ಜಮೀನಿಗೆ ತೊಂದರೆ ಕೊಡುವುದಿಲ್ಲವೆಂದು ಮುಚ್ಚಳಿಕೆ ಬರೆದುಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಕರ್ದಾ ನಕಾಶೆ ಬಿಟ್ಟು ನನ್ನ ತಾತನ ಹೆಸರಿನಲ್ಲಿ ಬೇರೆ ದಾಖಲೆಗಳು ಇರುವುದಿಲ್ಲ. ಪೂರ್ವಕ್ಕೆ-ತಮ್ಮಯ್ಯ ಬಿನ್ ಲೇಟ್ ದೇವೇಗೌಡರ ಜಮೀನು ಸೋಮನಾಯಕ ರವರ ಜಮೀನು, ಪಶ್ಚಿಮಕ್ಕೆ-ಸಿದ್ದೇಗೌಡ ಮತ್ತು ಚೌಡಯ್ಯ ಹಾಗೂ ಮಹದೇವಮ್ಮ ರವರ ಜಮೀನು,ಉತ್ತರಕ್ಕೆ-ನನ್ನದೇ ಜಮೀನು, ದಕ್ಷಿಣಕ್ಕೆ-ನಾಗಣ್ಣ, ಶಿವಲಿಂಗ, ರಾಜಶೇಖರ, ಶಾರದಮ್ಮನವರ ಜಮೀನು ಈ ಚೆಕ್ಕುಬಂಧಿಯಲ್ಲಿರುವ ಜಮೀನಿನಲ್ಲಿ ಪ್ರತಿವಾದಿ ಸ್ವಾಧೀನವಿದ್ದಾರೆ ಎಂದರೆ

ನಾನು ಇದ್ದೇನೆ. ನನ್ನ ವಾದ ಪತ್ರದಲ್ಲಿ ಈ ಚೆಕ್ಕುಬಂಧಿ ಬರೆಸಿ ಹಾಕಿದ್ದೇನೆ. ಪೂರ್ವಕ್ಕೆ–ವಾದಿಗಳು, ಪಶ್ಚಿಮ–ಸಣ್ಣಪ್ಪನಾಯಕ, ಉತ್ತರಕ್ಕೆ–ಬೊಮ್ಮನಾಯಕ, ದಕ್ಷಿಣಕ್ಕೆ–ಶಿವಲಿಂಗೇಗೌಡ ಈ ಚೆಕ್ಕುಬಂಧಿ ಸ.ನಂ.125 ಕ್ಕೆ ಕೊಟ್ಟಿದ್ದೇನೆ. ಪೂರ್ವಕ್ಕೆ ತಮ್ಮಯ್ಯ, ಸ್ವಾಮಿನಾಯಕ, ಪಶ್ಚಿಮಕ್ಕೆ ಸಿದ್ದೇಗೌಡ ಬಿನ್ ಲೇಟ್ ದೊಡ್ಡನಿಂಗೇಗೌಡ ಅಲಿಯಾಸ್ ದೊಡ್ಡಬಿಳಗಯ್ಯ, ಚೌಡಯ್ಯ ಬಿನ್ ಅಂಕನಾಯಕ, ಮಹದೇವಮ್ಮ ಕೋಂ ಅಂಕನಾಯಕ, ಉತ್ತರಕ್ಕೆ ಪ್ರತಿವಾದಿ, ದಕ್ಷಿಣಕ್ಕೆ– ಲೇ.ಸಣ್ಣಪುಟ್ಟೇಗೌಡರ ಮಕ್ಕಳಾದ ನಾಗಣ್ಣ, ಶಿವಲಿಂಗ, ರಾಜಶೇಖರ, ಶಾರದಮ್ಮ ಕೋಂ ತಮ್ಮಣ್ಣೇಗೌಡ ಈ ಚೆಕ್ಕುಬಂಧಿಯಲ್ಲಿರುವ 5 ಎಕರೆ 4 ಗುಂಟೆ ವಿಸ್ತೀರ್ಣದಲ್ಲಿ ಪ್ರತಿವಾದಿ ಸ್ವಾಧೀನವಿದ್ದಾರೆ ಎಂದರೆ ಸುಳ್ಳು ನಾವು ಅಣ್ಣ ತಮ್ಮಂದಿರು ಸ್ವಾಧೀನವಿದ್ದೇವೆ. ಈ ಚೆಕ್ಕುಬಂಧಿಯಲ್ಲಿ ನಾವು ಸ್ವಾಧೀನವಿರುವ ಬಗ್ಗೆ ವಾದಪತ್ರದಲ್ಲಿ ಬರೆಸಿದ್ದೇನೆ. ಯಾವ ದಿನಾಂಕದಂದು ನಾನು ಮತ್ತು ನಮ್ಮ ಅಣ್ಣ ತಮ್ಮಂದಿರು ವಿಭಾಗ ಮಾಡಿಕೊಂಡಿದ್ದೇವೆ ಎಂದು ಗೊತ್ತಿಲ್ಲ. ಸ.ನಂ.125 ರಲ್ಲಿ ನಾವು 6 ಜನ ಅಣ್ಣ ತಮ್ಮಂದಿರಿಗೆ ತಲಾ 29 ಗುಂಟೆ ಜಮೀನು ಬಂದಿದೆ. ದಾವಾ ಆಸ್ತಿ ಈಗ ನನ್ನ ತಾತನ ಹೆಸರಿನಲ್ಲಿದೆ. ಈಗ ನನ್ನ ತಾತನ ಹೆಸರಿನಲ್ಲಿದೆ ಎಂದು ತೋರಿಸಲು ಕರ್ದಾ ಕಾಪೀ ಇದೆ. ದಾವಾ ಆಸ್ತಿ ಪ್ರತಿವಾದಿಯ ತಾತ ಬಿಳಿಗಯ್ಯರವರಿಗೆ ಸೇರಿದೆ ಎಂದರೆ ಸುಳ್ಳು. ಪ್ರತಿವಾದಿಯ ತಾತ ಅವರ ಜೀವಿತಾವಧಿಯಲ್ಲಿ ದಾವಾ ಆಸ್ತಿಯ ಸ್ವಾಧೀನ ಹೊಂದಿದ್ದರು ಎಂದರೆ ಸುಳ್ಳು. ಪ್ರತಿವಾದಿಯ ತಾತ ಮೃತಪಟ್ಟ ನಂತರ ಅವರ ಒಬ್ಬನೇ ಮಗ ದೊಡ್ಡ ಬಿಳಗಯ್ಯ ಅಲಿಯಾಸ್ ದೊಡ್ಡ ಬಿಳಿಗೇಗೌಡರಿಗೆ ಖಾತೆಯಾಗಿತ್ತು ಎಂದರೆ ಸುಳ್ಳು. ದಾವಾ ಆಸ್ತಿಗೆ ಪ್ರತಿವಾದಿಯ ತಂದೆ ಮಾಲೀಕತ್ವ ಮತ್ತು ಸ್ವಾಧೀನ ಹೊಂದಿದ್ದರು ಎಂದರೆ ಸರಿಯಲ್ಲ. ಪ್ರತಿವಾದಿ ತಂದೆ ತೀರಿಕೊಂಡ ನಂತರ ದಾವಾ ಆಸ್ತಿಯ ಖಾತೆ ಪ್ರತಿವಾದಿಗೆ ಬದಲಾವಣೆಯಾಗಿದೆ ಎಂದರೆ ಅಕ್ರಮವಾಗಿ ಮಾಡಿಕೊಂಡಿದ್ದಾರೆ. ಅಕ್ರಮವಾಗಿ ಖಾತೆ ಮಾಡಿಸಿಕೊಂಡಿರುವ ಬಗ್ಗೆ ರೆವಿನ್ಯೂ ಅಧಿಕಾರಿಗೆ ದೂರು ಕೊಟ್ಟಿಲ್ಲ ಪೊಲೀಸ್ ಠಾಣೆಗೆ ಕೊಟ್ಟಿದ್ದೇನೆ. ಅಕ್ರಮವಾಗಿ ಖಾತೆ ಮಾಡಿಸಿಕೊಂಡಿರುವ ವಿಷಯ ಸುಮಾರು 20 ವರ್ಷಗಳ ಹಿಂದೆ ಗೊತ್ತಾಯಿತು. 20

ವರ್ಷಗಳಿಂದ ರೆವಿನ್ಯೂ ಮೇಲ್ಮನವಿ ಸಲ್ಲಿಸಲು ತೊಂದರೆ ಇತ್ತೆ ಎಂದರೆ ಪಂಚಾಯಿತಿ ದೂರು ಕೊಟ್ಟಿದ್ದೇವು ಅವರು ತೀರ್ಮಾನ ಮಾಡಿಕೊಡುವುದಾಗಿ ತಳ್ಳಿಕೊಂಡು ಬಂದೆವು.

**ಮುಂದುವರಿದ ಪಾಟೀ ಸವಾಲು ವಕೀಲರ ಕೋರಿಕೆಯ ಮೇರೆಗೆ ಮುಂದೂಡಲಾಯಿತು.**

***(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)***

**ಓ.ಹೆ.ಕೆ.ಸರಿ ಇದೆ.**

**ಹಿ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ.**
**ಪಿರಿಯಾಪಟ್ಟಣ**